ದಿನಾಂಕ: ಫೆಬ್ರವರಿ ೦೩,೨೦೧೪

# ತೃತೀಯ ರಂಗ ಮರಳಿದೆಯೇ?

ಅರುಣ್ ಜೇಟ್ಲಿ
ವಿರೋಧ ಪಕ್ಷದ ನಾಯಕರು(ರಾಜ್ಯ ಸಭಾ)

ತೃತೀಯ ರಂಗ ಮರಳಿದೆಯೇ? ತೃತೀಯ ರಂಗದ ಯೋಜನೆಯ ಹಿಂದೆ ಯಾರಿದ್ದಾರೆ? ಅದರ ಪರಿಣಾಮಗಳೇನು? ತೃತೀಯ ರಂಗದ ಆಲೋಚನೆಯನ್ನು ಪ್ರಮುಖವಾಗಿ ಜನತಾ ದಳ(ಸಮ್ಮಿಶ್ರ) ಹಾಗೂ ಸಮಾಜವಾದಿ ಪಕ್ಷ ಮಾಡುತ್ತಿದೆ. ಈ ಎರಡೂ ಪಕ್ಷಗಳ ವ್ಯಕ್ತಿತ್ವ ಪತನವಾಗಿದೆ. ಭಾಜಪ ಜೊತೆಯಿದ್ದ ದೀರ್ಘಾವಧಿ ಸಂಘವನ್ನು ಜೆಡಿ(ಎಸ್) ತೊರೆದಿದೆ. ಇದರಿಂದ ಆ ಪಕ್ಷ ಲೋಕಸಭಾ ಚುನಾವಣೆಯಲ್ಲಿ ಒಂದೇ ಒಂದು ಸ್ಥಾನಗಳಿಸುವುದು ದುಸ್ತರವಾಗಿದೆ. ಪಕ್ಷವು ಕೇವಲ ಬಿಹಾರ್ ರಾಜ್ಯಕ್ಕೆ ಸೀಮಿತವಾಗಿದೆ. ಲಾಲು ಪ್ರಸಾದ್ ಯಾದವ್ ಸೆರೆವಾಸ ಅನುಭವಿಸಿದರೆ, ಅಲ್ಪಸಂಖ್ಯಾತರು ತಮ್ಮ ಬೆಂಬಲಕ್ಕೆ ನಿಲ್ಲುತ್ತಾರೆಂಬ ಅಪಾಯಕಾರಿ ಲೆಖ್ಖಾಚಾರವನ್ನು ಆ ಪಕ್ಷದ ನಾಯಕರು ಮಾಡಿದ್ದರು. ಆರ್‌ಜೆಡಿ ನಾಯಕನಿಗೆ ಜಾಮೀನು ದೊರೆತ ಕಾರಣ ಅವರ ಲೆಖ್ಖಾಚಾರ ಏರುಪೇರಾಯಿತು. ಯುಪಿಎ ಒಂದು ಹಾಗೂ ಎರಡು ಅಧಿಕಾರದಲ್ಲಿ ಉಳಿಯಲು ಉತ್ತರಪ್ರದೇಶದ ಎಸ್‌ಪಿ ಜವಾಬ್ದಾರರು. ಎಲ್ಲಾ ಬಿಕ್ಕಟ್ಟಿನಲ್ಲೂ ಆ ಪಕ್ಷ ಯುಪಿಎ ನೆರವಿಗೆ ಧಾವಿಸಿತ್ತು. ಇದಕ್ಕೆ ಪರೋಪಕಾರಾರ್ಥ ಆ ಪಕ್ಷದ ನಾಯಕರು ಮತ್ತು ಕುಟುಂಬವರ್ಗದವರ ವಿರುದ್ಧ ಹೇರಲಾದ ಭ್ರಷ್ಟಾಚಾರ ಪ್ರಕರಣಗಳನ್ನು ದುರ್ಬಲಗೊಳಿಸಲು ಕೇಂದ್ರದ ಯುಪಿಎ ಸರ್ಕಾರ ಸಿಬಿಐ ನೆರವು ಒದಗಿಸಿತು. ಕಾಂಗ್ರೆಸ್ ವಿರೋಧಿ ಅಲೆ ಎದ್ದಿರುವ ಈ ಸಂದರ್ಭದಲ್ಲಿ ವಿಶ್ವಾಸಾರ್ಹ ರಾಜಕೀಯ ವ್ಯಕ್ತಿತ್ವವನ್ನು ಮನದಟ್ಟುಪಡಿಸುವ ಸಾಧ್ಯತೆಯಿಲ್ಲ. ಅದಕ್ಕಿರುವ ಎರಡು ವೋಟ್ ಬ್ಯಾಂಕ್‌ಗಳೆಂದರೆ ಯಾದವರು ಮತ್ತು ಮುಸ್ಲಿಮರು. ಯಾದವರಲ್ಲಿ ಒಂದು ಭಾಗ ನರೇಂದ್ರ ಮೋದಿ ಪರವಾಗಿದ್ದರೆ ಮತ್ತೊಂದು ಭಾಗ ಮುಜಾಫರ್‌ನಗರ ಗಲಭೆಯ ನಂತರ ಸಂಪೂರ್ಣವಾಗಿ ಭ್ರಮನಿರಸನಗೊಂಡಿದೆ. ತಮ್ಮ ಪ್ರಭಾವವಿರುವ ಪ್ರದೇಶಗಳಲ್ಲಿ ಜೆಡಿ(ಯು) ಹಾಗೂ ಎಸ್‌ಪಿ ಸೋಲನುಭವಿಸುವ ಸಾಧ್ಯತೆಯಿದೆ. ಸೋಲುವ ಪಕ್ಷಗಳ ತೃತೀಯ ರಂಗ ಎಷ್ಟರ ಮಟ್ಟಿಗೆ ತೃತೀಯ ರಂಗ ರಚಿಸುವ ಪ್ರಯತ್ನದಲ್ಲಿ ಯಶಸ್ವಿ ಆಗಿಯಾರು ಎಂಬ ಜಿಜ್ಞಾಸೆ ಮೂಡಿದೆ.

ಕಾಂಗ್ರೆಸ್ ಹಾಗೂ ಭಾಜಪ ಪಕ್ಷಗಳೊಂದಿಗೆ ಸಮಾಂತರ ಕಾಯ್ದುಕೊಳ್ಳುವ ಮೂಲ ನಿರ್ಣಯವನ್ನು ತೃತೀಯ ರಂಗ ರಚಿಸಲು ಬಯಸುವ ಪಕ್ಷಗಳು ತೆಗೆದುಕೊಂಡಿವೆ. ಜೆಡಿ(ಯು) ಹಾಗೂ ಸಮಾಜವಾದಿ ಪಕ್ಷ ಸಮಾಂತರ ಕಾಯ್ದುಕೊಳ್ಳುವ ಹೇಳಿಕೆ ನೀಡಲು ಹೇಗೆ ಸಾಧ್ಯ? ಕಾಂಗ್ರೆಸ್ ಸ್ನೇಹ ಸಂಪಾದಿಸುವ ಪೈಪೋಟಿಯಲ್ಲಿ ಜೆಡಿ(ಯು)ಗೆ ಹಿನ್ನಡೆಯಾಯಿತು ಹಾಗೂ ಆರ್‌ಜೆಡಿಗೆ ಗೆಲವಾಯಿತು. ಯುಪಿಎ ೧೦ ವರ್ಷಗಳೂ ತನ್ನ ಅಧಿಕಾರ ಉಳಿಸಿಕೊಳ್ಳಲು ಎಸ್‌ಪಿ ಬೆಂಬಲ ನೀಡಿತು.

ಕೆಲವು ರಾಜ್ಯಗಳಲ್ಲಿ ಪ್ರಾದೇಶಿಕ ಪಕ್ಷಗಳು ಅಧಿಕಾರದಲ್ಲಿವೆ. ಈ ಪ್ರಾದೇಶಿಕ ಪಕ್ಷಗಳಿಗೆ ತಮ್ಮದೇ ಮತ ಬ್ಯಾಂಕ್‌ಗಳಿವೆ. ಆಯಾ ರಾಜ್ಯಗಳಲ್ಲಿ ಈ ಪಕ್ಷಗಳು ಗಣನೀಯ ಪ್ರಮಾಣದಲ್ಲಿ ಲೋಕಸಭಾ ಸೀಟುಗಳನ್ನು ಗೆಲ್ಲಲು ಸಾಧ್ಯ. ಕಾಂಗ್ರೆಸೇತರ ಮತಗಳ ಬೆಂಬಲವನ್ನು ಈ ಪ್ರಾದೇಶಿಕ ಪಕ್ಷಗಳು ಹೊಂದಿವೆ. ಈ ಹಿಂದೆ ಎನ್‌ಡಿಎ ಜೊತೆ ಕೆಲವಾರು ಪ್ರಾದೇಶಿಕ ಪಕ್ಷಗಳು ಗುರುತಿಸಿಕೊಂಡಿದ್ದವು. ಕಾಂಗ್ರೆಸ್‌ನೊಂದಿಗೆ ಗುರುತಿಸಿಕೊಂಡರೆ ಅವರ ರಾಜಕೀಯ ಬೇಳೆ

ಬೇಯುವುದಿಲ್ಲ. ಅವರ ರಾಜಕೀಯ ಅಸ್ತಿತ್ವ ಕುಂದುವ ಸಾಧ್ಯತೆಯಿದೆ. ವಿಶ್ವಾಸಾರ್ಹ ರಾಜಕೀಯ ಹೊಂದಾಣಿಕೆ ಮಾಡಿಕೊಳ್ಳುವ ಪ್ರಯತ್ನದಲ್ಲಿ ಮುಖ್ಯ ಪಾತ್ರ ವಹಿಸಬಲ್ಲ ರಾಜಕೀಯ ಶಕ್ತಿಯನ್ನು ಕಾಂಗ್ರೆಸ್ ಪಕ್ಷ ಈ ಬಾರಿ ಹೊಂದುವ ಲಕ್ಷಣಗಳಿಲ್ಲ. ಸಣ್ಣ ಪಕ್ಷಗಳ ಪಾತ್ರವನ್ನಷ್ಟೆ ನಿಭಾಯಿಸುವ ಪರಿಸ್ಥಿತಿ ಕಾಂಗ್ರೆಸ್ ಪಕ್ಷ ಎದುರಿಸಬಹುದಾದ್ದರಿಂದ ಪ್ರಮುಖ ಪಾತ್ರ ವಹಿಸುವ ಬಲಾಬಲ ಅದಕ್ಕೆ ಇರುವುದಿಲ್ಲ.

ತೃತೀಯ ರಂಗದ ಅಭಿಲಾಷಿಗಳು ಪರಸ್ಪರ ವಿರೋಧಿಗಳಾಗಿವೆ: ತೃಣಮೂಲ ಕಾಂಗ್ರೆಸ್ ಎಡಪಕ್ಷಗಳ ವಿರೋಧಿಯಾಗಿದೆ. ಎಸ್‌ಪಿ ಹಾಗೂ ಬಿಎಸ್‌ಪಿ ವಿರೋಧಿಗಳು, ಎಐಎಡಿಎಂಕೆ ಮತ್ತು ಡಿಎಂಕೆ ರಾಜಕೀಯ ವಿರೋಧಿಗಳು ಮತ್ತು ಜೆಡಿ(ಯು) ಹಾಗೂ ಆರ್‌ಜೆಡಿ ವಿಪಕ್ಷಗಳಾಗಿವೆ. ರಾಜಕೀಯ ಎದುರಾಳಿಗಳು ತೃತೀಯ ರಂಗ ರೂಪಿಸಲು ಸಾಧ್ಯವಿದೆಯೆ? ತೃತೀಯ ರಂಗಕ್ಕೆ ಸೈದ್ಧಾಂತಿಕ ಏಕಮತವಿಲ್ಲ. ತೃತೀಯ ರಂಗದಲ್ಲಿ ನಾಯಕತ್ವ ನೀಡಬಲ್ಲ ದೊಡ್ಡ ಗಾತ್ರದ ಪಕ್ಷವಿಲ್ಲದ ಕಾರಣ ಅವರು ರೂಪಿಸುವ ಸರ್ಕಾರ ದೃಢವಾಗಿ ನಿಲ್ಲದು.

ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ವಿರುದ್ಧ ಅವಿಶ್ವಾಸ ಸ್ಪಷ್ಟವಾಗಿ ಗೋಚರಿಸುತ್ತಿದೆ. ಆರ್ಥಿಕ ದುರ್ವ್ಯವಸ್ಥೆಯಿಂದ ದೇಶವನ್ನು ಪಾರು ಮಾಡಲು, ಸಮಗ್ರ, ನಿರ್ಣಾಯಕ ಹಾಗೂ ರಾಜಕೀಯ ಸ್ಥಿರತೆಯ ಅಗತ್ಯವಿದೆ. ಇದಕ್ಕೆ ತದ್ವಿರುದ್ಧವಾದ ಲಕ್ಷಣಗಳನ್ನು ತೃತೀಯ ರಂಗ ಹೊಂದಿದೆ. ತೃತೀಯ ರಂಗದ ಕೂಗು ಹೆಚ್ಚಿದಷ್ಟು, ತಮ್ಮ ಸ್ವಂತ ಬಲದ ಮೇಲೆ ಸರ್ಕಾರ ರಚಿಸಬಲ್ಲ ನರೇಂದ್ರ ಮೋದಿ ಅವರ ನೇತೃತ್ವದ ಎನ್‌ಡಿಎಗೆ ಜನಮತದ ಪುಷ್ಠಿ ಹೆಚ್ಚಲಿದೆ.

**********